# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ | : | 1574(1773) |
| ಸದಸ್ಯರ ಹೆಸರು | : | ಡಾ|| ಎಂ.ಜಿ.ಮುಳೆ<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 23.03.2026 |
| ಉತ್ತರಿಸುವ ಸಚಿವರು | : | ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

<table>
<tr><th>ಕ್ರ ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಪ್ರಸ್ತುತ ಬೀದರ್ ಜಿಲ್ಲೆಯಲ್ಲಿ ಇರುವ ಒಟ್ಟು ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳ ಪೈಕಿ ಎಷ್ಟು ಶಾಲೆಗಳಲ್ಲಿ 'ಸ್ಮಾರ್ಟ್ ಕ್ಲಾಸ್' (Smart Class) ಸೌಲಭ್ಯ ಕಲ್ಪಿಸಲಾಗಿದೆ; ಈ ಪೈಕಿ ಎಷ್ಟು ಶಾಲೆಗಳಲ್ಲಿ ಉಪಕರಣಗಳು (ಪ್ರೊಜೆಕ್ಟರ್, ಕಂಪ್ಯೂಟರ್, ಇಂಟರಾಕ್ಟಿವ್ ಬೋರ್ಡ್) ಸುಸ್ಥಿತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ; (ತಾಲ್ಲೂಕುವಾರು ಮಾಹಿತಿ ನೀಡುವುದು)</td><td>

- ಪ್ರಸ್ತುತ ಬೀದರ್ ಜಿಲ್ಲೆಯಲ್ಲಿ ಒಟ್ಟು 1388 ಸರ್ಕಾರಿ ಶಾಲೆಗಳಿದ್ದು, ಅವುಗಳಲ್ಲಿ 1221 ಪ್ರಾಥಮಿಕ ಶಾಲೆಗಳು ಮತ್ತು 167 ಪ್ರೌಢ ಶಾಲೆಗಳಾಗಿವೆ. ಇದರಲ್ಲಿ 75 ಪ್ರಾಥಮಿಕ ಹಾಗೂ 79 ಪ್ರೌಢ ಶಾಲೆಗಳು ಸೇರಿ ಒಟ್ಟು 154 ಸರ್ಕಾರಿ ಶಾಲೆಗಳಲ್ಲಿ 'ಸ್ಮಾರ್ಟ್ ಕ್ಲಾಸ್' ಸೌಲಭ್ಯವನ್ನು ಒದಗಿಸಲಾಗಿದೆ.
- ಬೀದರ್ ಜಿಲ್ಲೆಯ ತಾಲ್ಲೂಕುವಾರು ಸುಸ್ಥಿತಿಯಲ್ಲಿರುವ ಪ್ರೊಜೆಕ್ಟರ್, ಕಂಪ್ಯೂಟರ್, ಇಂಟರಾಕ್ಟಿವ್ ಬೋರ್ಡ್ ಉಪಕರಣಗಳ ವಿವರ ಕೆಳಗಿನಂತಿದೆ.

<table>
<tr><th>ತಾಲ್ಲೂಕಿನ ಹೆಸರು</th><th>Smart Class / ಇಂಟರಾಕ್ಟಿವ್ ಬೋರ್ಡ್ ಸುಸ್ಥಿತಿ ಯಲ್ಲಿರುವ ಶಾಲೆಗಳ ಸಂಖ್ಯೆ</th><th>ಪ್ರೊಜೆಕ್ಟರ್ ಸುಸ್ಥಿತಿ ಯಲ್ಲಿರುವ ಶಾಲೆಗಳ ಸಂಖ್ಯೆ</th><th>ಕಂಪ್ಯೂಟರ್ ಸುಸ್ಥಿತಿ ಯಲ್ಲಿರುವ ಶಾಲೆಗಳ ಸಂಖ್ಯೆ</th></tr>
<tr><td>ಔರಾದ್</td><td>26</td><td>33</td><td>34</td></tr>
<tr><td>ಬಸವಕಲ್ಯಾಣ</td><td>32</td><td>58</td><td>42</td></tr>
<tr><td>ಬಾಲ್ಕಿ</td><td>19</td><td>33</td><td>39</td></tr>
<tr><td>ಬೀದರ್</td><td>36</td><td>65</td><td>46</td></tr>
<tr><td>ಹುಮನಾಬಾದ</td><td>41</td><td>61</td><td>50</td></tr>
<tr><td>ಒಟ್ಟು</td><td>**154**</td><td>**250**</td><td>**211**</td></tr>
</table>
</td></tr>
<tr><td>ಆ)</td><td>ಶಾಲೆಗಳಿಗೆ ಸ್ಮಾರ್ಟ್ ಕ್ಲಾಸ್ ಉಪಕರಣಗಳ ದುರಸ್ತಿ ಹಾಗೂ ನಿರ್ವಹಣೆಗೆ (Maintenance) ಪ್ರತ್ಯೇಕ ಅನುದಾನವನ್ನು ಮೀಸಲಿಡಲಾಗಿದೆಯೇ, ಕಳೆದ ಎರಡು ವರ್ಷಗಳಲ್ಲಿ ಹಾಳಾದ ಉಪಕರಣಗಳ ಸಂಖ್ಯೆ ಎಷ್ಟು ಅವುಗಳನ್ನು ಸರಿಪಡಿಸಲು ಅಥವಾ ಬದಲಾಯಿಸಲು ಕೈಗೊಂಡ ಕ್ರಮಗಳ ವಿವರವೇನು;</td><td>

- ಶಾಲೆಗಳಲ್ಲಿ "ಸ್ಮಾರ್ಟ್ ಕ್ಲಾಸ್" ಉಪಕರಣಗಳ ದುರಸ್ತಿ ಹಾಗೂ ನಿರ್ವಹಣೆಗಾಗಿ(Maintenance) ಪ್ರತ್ಯೇಕವಾಗಿ ಯಾವುದೇ ಅನುದಾನವನ್ನು ಮೀಸಲಿಡಲಾಗಿರುವುದಿಲ್ಲ. ಆದರೆ ಶಾಲಾ ಅನುದಾನದಡಿಯಲ್ಲಿ ಇದನ್ನು ನಿರ್ವಹಿಸಬಹುದು.
- ಉಪಕರಣಗಳ ಖರೀದಿ ಪ್ರಕ್ರಿಯೆಯಲ್ಲಿ 2022-23 ಮತ್ತು 2024-25ನೇ ಸಾಲಿನಲ್ಲಿ PAB ಅನುಮೋದನೆಯಂತೆ ಒದಗಿಸಲಾಗಿರುವ ಉಪಕರಣಗಳಿಗೆ ಜಿಲ್ಲಾ ಹಂತದ ಖರೀದಿ ಪ್ರಕ್ರಿಯೆಯಲ್ಲಿ 03 ವರ್ಷಗಳ ಅವಧಿಗೆ Maintenance ಗಾಗಿ ಅನುದಾನವನ್ನು ಮೀಸಲಿರಿಸಲಾಗಿದೆ.
- 2025-26ನೇ ಸಾಲಿನಲ್ಲಿಯೂ ಸಹ PAB ಅನುಮೋದನೆಯಂತೆ
</td></tr>
</table>

ಒದಗಿಸಲಾಗುತ್ತಿರುವ ಉಪಕರಣಗಳಿಗೆ 03 ವರ್ಷಗಳ ಅವಧಿಗೆ Maintenance ಗಾಗಿ ಅನುದಾನವನ್ನು ಮೀಸಲಿರಿಸಲಾಗುವುದು.

**ಕಳೆದ ಎರಡು ವರ್ಷಗಳಲ್ಲಿ ಬೀದರ್ ಜಿಲ್ಲೆಯಲ್ಲಿ ಹಾಳಾದ ಉಪಕರಣಗಳ ವಿವರ**

| ಕ್ರ. ಸಂ | ಶಾಲೆಗಳು | ಕಳೆದ 2 ವರ್ಷಗಳಲ್ಲಿ ಹಾಳಾದ ಉಪಕರಣಗಳ ಸಂಖ್ಯೆ | ಅವುಗಳನ್ನು ಸರಿಪಡಿಸಲು ಅಥವಾ ಬದಲಾಯಿಸಲು ಕೈಗೊಂಡ ಕ್ರಮಗಳ ವಿವರ |
|---|---|---|---|
| 1 | ಪ್ರಾಥಮಿಕ | 08 | ಶಾಲಾ ಅನುದಾನದಡಿಯಲ್ಲಿ ಸದರಿ ಉಪಕರಣಗಳ ದುರಸ್ತಿಯನ್ನು ನಿರ್ವಹಿಸಬಹುದಾಗಿರುತ್ತದೆ. |
| 2 | ಪ್ರೌಢ | 09 | |
| | **ಒಟ್ಟು** | **17** | |

ಸದರಿ ಉಪಕರಣಗಳನ್ನು ಸರಿಪಡಿಸಲು ಅಥವಾ ಬದಲಾಯಿಸಲು ಸಮಗ್ರ ಶಿಕ್ಷಣ ಕರ್ನಾಟಕದಿಂದ ಬಿಡುಗಡೆ ಮಾಡಲಾಗಿರುವ ಶಾಲಾ ಅನುದಾನವನ್ನು ಬಳಸಬಹುದು.

ಇ) ಡಿಜಿಟಲ್ ಕಲಿಕೆಗೆ ಅಗತ್ಯವಾದ ಇಂಟರ್ನೆಟ್ ಸಂಪರ್ಕ ಇಲ್ಲದ ಸರ್ಕಾರಿ ಶಾಲೆಗಳ ಸಂಖ್ಯೆ ಎಷ್ಟು; ಗ್ರಾಮೀಣ ಭಾಗದ ಶಾಲೆಗಳಿಗೆ ಹೈ-ಸ್ಪೀಡ್ ಇಂಟರ್ನೆಟ್ ಒದಗಿಸಲು BharatNet ಅಥವಾ ಇತರೆ ಯೋಜನೆಗಳ ಮೂಲಕ ಯಾವುದೇ ಕಾರ್ಯಯೋಜನೆ ಜಾರಿಯಲ್ಲಿದೆಯೇ;
(ತಾಲ್ಲೂಕುವಾರು ಮಾಹಿತಿ ನೀಡುವುದು);

ಬೀದರ್ ಜಿಲ್ಲೆಯ 1258 ಸರ್ಕಾರಿ ಶಾಲೆಗಳಲ್ಲಿ ಇಂಟರ್ನೆಟ್ ಸಂಪರ್ಕ ಇರುವುದಿಲ್ಲ. ತಾಲ್ಲೂಕುವಾರು ವಿವರಗಳು ಕೆಳಕಂಡಂತಿರುತ್ತವೆ.

| ತಾಲ್ಲೂಕಿನ ಹೆಸರು | ಇಂಟರ್ನೆಟ್ ಸಂಪರ್ಕವಿಲ್ಲದ ಶಾಲೆಗಳ ಸಂಖ್ಯೆ |
|---|---|
| ಔರಾದ್ | 307 |
| ಬಸವಕಲ್ಯಾಣ | 212 |
| ಬಾಲ್ಕಿ | 218 |
| ಬೀದರ್ | 295 |
| ಹುಮನಾಬಾದ | 226 |
| ಒಟ್ಟು | **1258** |

- ಗ್ರಾಮೀಣ ಭಾಗದ ಶಾಲೆಗಳಿಗೆ ಹೈ-ಸ್ಪೀಡ್ ಇಂಟರ್ನೆಟ್ ಒದಗಿಸಲು ಕೇಂದ್ರ ಸರ್ಕಾರದ BharatNet ಯೋಜನೆಯು ರಾಜ್ಯದಲ್ಲಿ ಜಾರಿಯಲ್ಲಿದೆ. ಸದರಿ ಯೋಜನೆಯಡಿಯಲ್ಲಿ ರಾಜ್ಯದ ಗ್ರಾಮೀಣ ಭಾಗದ ಸರ್ಕಾರಿ ಪ್ರೌಢಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳಿಗೆ ಬಿ.ಎಸ್.ಎನ್.ಎಲ್.ನಿಂದ ಬ್ರಾಡ್ ಬ್ಯಾಂಡ್ ಸಂಪರ್ಕಗಳನ್ನು ಒದಗಿಸಲಾಗುತ್ತಿದೆ.

- ಪ್ರಸ್ತುತ, 2025-26ನೇ ಸಾಲಿನಲ್ಲಿ ಈ ಯೋಜನೆ ಅಡಿಯಲ್ಲಿ ಬೀದರ್ ಜಿಲ್ಲೆಯ 18 ಸರ್ಕಾರಿ ಶಾಲೆಗಳಿಗೆ ಬಿ.ಎಸ್.ಎನ್.ಎಲ್. ವತಿಯಿಂದ ಬ್ರಾಡ್ ಬ್ಯಾಂಡ್ ಸಂಪರ್ಕ

ಕಲ್ಪಿಸಲಾಗಿದೆ(ಅನುಬಂಧ-1 ಲಗತ್ತಿಸಿದೆ). ಸದರಿ ಯೋಜನೆಯಡಿ ಹಂತ ಹಂತವಾಗಿ ಗ್ರಾಮೀಣ ಭಾಗದ ಎಲ್ಲಾ ಸರ್ಕಾರಿ ಪ್ರೌಢಶಾಲೆಗಳಿಗೆ ಹಾಗೂ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಬ್ರಾಡ್ ಬ್ಯಾಂಡ್ ಸಂಪರ್ಕ ಒದಗಿಸಲಾಗುವುದು.

**ಈ)** "ಸ್ಮಾರ್ಟ್ ಕ್ಲಾಸ್" ಸೌಲಭ್ಯಗಳನ್ನು ಪರಿಣಾಮಕಾರಿಯಾಗಿ ಬಳಸಲು ಮತ್ತು ಡಿಜಿಟಲ್ ಬೋಧನಾ ವಿಧಾನಗಳನ್ನು ಅಳವಡಿಸಿಕೊಳ್ಳಲು ಜಿಲ್ಲೆಯ ಎಷ್ಟು ಶಿಕ್ಷಕರಿಗೆ ವಿಶೇಷ "ಡಿಜಿಟಲ್ ಪೆಡಗೊಜಿ" (Digital Pedagogy) ತರಬೇತಿ ನೀಡಲಾಗಿದೆ; ಕಳೆದ ಒಂದು ವರ್ಷದಲ್ಲಿ ಹಮ್ಮಿಕೊಂಡ ಕಾರ್ಯಗಾರಗಳ ಸಂಖ್ಯೆ ಎಷ್ಟು;

ಹೌದು. ಜಿಲ್ಲೆಯಲ್ಲಿ "ಡಿಜಿಟಲ್ ಪೆಡಗೊಜಿ" (Digital Pedagogy) ತರಬೇತಿ ಪಡೆದುಕೊಂಡಿರುವ ಒಟ್ಟು ಶಿಕ್ಷಕರ ಸಂಖ್ಯೆ 653. ಜಿಲ್ಲೆಯಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಹಮ್ಮಿಕೊಂಡಿರುವ ಕಾರ್ಯಾಗಾರಗಳ ಸಂಖ್ಯೆ 16.

| **ತರಬೇತಿ ನೀಡಲಾಗಿರುವ ಶಿಕ್ಷಕರ ವಿವರ** | | **ಒಂದು ವರ್ಷದಲ್ಲಿ ಹಮ್ಮಿಕೊಂಡ ಕಾರ್ಯಗಾರಗಳ ಸಂಖ್ಯೆ** |
|---|---|---|
| ಪ್ರಾಥಮಿಕ ಶಾಲಾ ಶಿಕ್ಷಕರು | **575** | **14** |
| ಪ್ರೌಢ ಶಾಲಾ ಶಿಕ್ಷಕರು | **78** | **2** |
| ಒಟ್ಟು | **653** | **16** |

**ಉ)** ಗ್ರಾಮೀಣ ಮತ್ತು ನಗರ ಪ್ರದೇಶದ ವಿದ್ಯಾರ್ಥಿಗಳ ನಡುವಿನ ಡಿಜಿಟಲ್ ಅಂತರ (Digital Divide) ಕಡಿಮೆ ಮಾಡಲು ಮುಂದಿನ ಶೈಕ್ಷಣಿಕ ವರ್ಷದೊಳಗೆ ಜಿಲ್ಲೆಯ ಎಲ್ಲಾ ಸರ್ಕಾರಿ ಶಾಲೆಗಳಿಗೆ "ಸ್ಮಾರ್ಟ್ ಕ್ಲಾಸ್" ಸೌಲಭ್ಯವನ್ನು ವಿಸ್ತರಿಸುವ ಗುರಿ ಸರ್ಕಾರ ಹೊಂದಿದೆಯೇ; ಇದ್ದಲ್ಲಿ ಹಂತವಾರು ಅನುಷ್ಠಾನ ಯೋಜನೆ ಮತ್ತು ಅಂದಾಜು ವೆಚ್ಚದ ವಿವರವೇನು?

ಹೌದು. ಪ್ರಸ್ತುತ 2025-26ನೇ ಸಾಲಿನಲ್ಲಿ ಬೀದರ್ ಜಿಲ್ಲೆಗೆ ಒದಗಿಸಲಾಗುತ್ತಿರುವ ಉಪಕರಣಗಳ ವಿವರ ಕೆಳಗಿನಂತಿದೆ.

| **ತಾಲ್ಲೂಕಿನ ಹೆಸರು** | **Smart Class (Interactive Display board & 1 KV UPS with Battery)** | **02 Projector (KGBV Schools)** | **03 Computer & 01 2 KV UPS with Battery (KGBV Schools)** | **05 Computer, 01 Laptop & 01 2 KV UPS with Battery** |
|---|---|---|---|---|
| ಔರಾದ್ | 23 | 1 | 1 | - |
| ಬಸವಕಲ್ಯಾಣ | 24 | 1 | 1 | 2 |
| ಬಾಲ್ಕಿ | 11 | - | - | 1 |
| ಬೀದರ್ | 19 | 1 | 1 | 1 |
| ಹುಮನಾಬಾದ | 15 | 1 | 1 | - |
| ಒಟ್ಟು | **92** | **4** | **4** | **4** |

- 2026-27ನೇ ಶೈಕ್ಷಣಿಕ ಸಾಲಿಗೆ ಸಮಗ್ರ ಶಿಕ್ಷಣ ಕರ್ನಾಟಕದ ವತಿಯಿಂದ ICT and Digital Initiatives ಅಡಿಯಲ್ಲಿ ಕೇಂದ್ರ ಶಿಕ್ಷಣ ಸಚಿವಾಲಯದ Plan Approval Board (PAB) ನ ಅನುಮೋದನೆಯಂತೆ ಹಂತ ಹಂತವಾಗಿ ಸರ್ಕಾರಿ ಶಾಲೆಗಳಿಗೆ "ಸ್ಮಾರ್ಟ್ ಕ್ಲಾಸ್" ಸೌಲಭ್ಯವನ್ನು ಅನುಷ್ಠಾನಗೊಳಿಸಲಾಗುವುದು.
- ಡಿ.ಎಸ್.ಇ.ಆರ್.ಟಿ ಯ ಮೂಲಕ, 2016-17ನೇ ಸಾಲಿನಿಂದ 2024-25ರ ಅವಧಿಯಲ್ಲಿ, ವಿವಿಧ ಯೋಜನೆಗಳಡಿ ಸರ್ಕಾರಿ

ಪ್ರೌಢಶಾಲೆಗಳಿಗೆ ಲ್ಯಾಪ್‌ಟಾಪ್‌ಗಳು (4445 ಶಾಲೆಗಳು) ಮತ್ತು ಪ್ರೊಜೆಕ್ಟರ್‌ಗಳನ್ನು (3221 ಶಾಲೆಗಳು) ಪೂರೈಸಲಾಗಿದ್ದು, ಲ್ಯಾಪ್‌ಟಾಪ್‌ಗಳಲ್ಲಿ ಇ-ಸಂಪನ್ಮೂಲಗಳನ್ನು ಅಳವಡಿಸಿ ತರಗತಿ ಬೋಧನಾ ಪ್ರಕ್ರಿಯೆಯಲ್ಲಿ ಪ್ರೊಜೆಕ್ಟರ್‌ಗಳನ್ನು ಬಳಸುವ ಮೂಲಕ ಸ್ಮಾರ್ಟ್ ಕ್ಲಾಸ್ ಸೌಲಭ್ಯವನ್ನು ಒದಗಿಸಲಾಗಿದೆ.

- "ಸ್ಮಾರ್ಟ್ ಕ್ಲಾಸ್" ಸೌಲಭ್ಯವನ್ನು ವಿಸ್ತರಿಸುವ ಗುರಿ ಸರ್ಕಾರ ಹೊಂದಿದ್ದು, ಹಂತವಾರು ಅನುಷ್ಠಾನ ಯೋಜನೆ ಮತ್ತು ಅಂದಾಜು ವೆಚ್ಚದ ವಿವರಗಳು ಕೆಳಕಂಡಂತಿರುತ್ತವೆ.

1. 2026-27ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಕೆ.ಪಿ.ಎಸ್, ಆದರ್ಶ ಮತ್ತು ಪಿ.ಎಂ.ಶ್ರೀ ಶಾಲೆಗಳನ್ನು ಒಳಗೊಂಡಂತೆ ಒಟ್ಟು 2402 ಶಾಲೆಗಳಲ್ಲಿ ಕಲಿಯುತ್ತಿರುವ 1, 2 ಮತ್ತು 6ನೇ ತರಗತಿಗಳ ಅಂದಾಜು 2,14,788 ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣ ಪಠ್ಯಪುಸ್ತಕಗಳನ್ನು ಮುದ್ರಿಸಿ ವಿತರಿಸಲು ರೂ. 92.62 ಲಕ್ಷಗಳಲ್ಲಿ ಸಮಗ್ರ ಶಿಕ್ಷಣ ಕರ್ನಾಟಕದಿಂದ ಅಂದಾಜಿಸಲಾಗಿದೆ. ಇದರಲ್ಲಿ ಬೀದರ್ ಜಿಲ್ಲೆಯ ಒಟ್ಟು 83 ಶಾಲೆಗಳಿಗೆ ಅಂದಾಜು ರೂ.3.20 ಲಕ್ಷಗಳ ಅನುದಾನವನ್ನು ಯೋಜಿಸಲಾಗಿದೆ.
2. 2026-27ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಕೆ.ಪಿ.ಎಸ್, ಆದರ್ಶ ಮತ್ತು ಪಿ.ಎಂ.ಶ್ರೀ ಶಾಲೆಗಳನ್ನು ಒಳಗೊಂಡಂತೆ ಒಟ್ಟು 2402 ಶಾಲೆಗಳಲ್ಲಿ 1, 2 ಮತ್ತು 6ನೇ ತರಗತಿ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಶಿಕ್ಷಣ ಅನುಷ್ಠಾನಗೊಳಿಸಲು Computer Facilitator ಗಳಿಗೆ ಗೌರವ ಸಂಭಾವನೆ ನೀಡಲು ಅಂದಾಜು ರೂ. 4804.00 ಲಕ್ಷಗಳಲ್ಲಿ ಸಮಗ್ರ ಶಿಕ್ಷಣ ಕರ್ನಾಟಕದಿಂದ ಅಂದಾಜಿಸಲಾಗಿದೆ. ಇದರಲ್ಲಿ ಬೀದರ್ ಜಿಲ್ಲೆಯ ಒಟ್ಟು 83 ಶಾಲೆಗಳ Computer Facilitator ಗಳಿಗೆ ಗೌರವ ಸಂಭಾವನೆ ಅಂದಾಜು ರೂ.166.0 ಲಕ್ಷಗಳ ಅನುದಾನವನ್ನು ಯೋಜಿಸಲಾಗಿದೆ.
3. ಸರ್ಕಾರಿ ಶಾಲಾ ವಿದ್ಯಾರ್ಥಿಗಳಲ್ಲಿ ಕಂಪ್ಯೂಟರ್ ಸಾಕ್ಷರತೆಯನ್ನು ತರುವ ಉದ್ದೇಶದಿಂದ ಮರುಪದನಾಮಗೊಳಿಸಲಾಗುವ 534 ಕೆ.ಪಿ.ಎಸ್ ಶಾಲೆಗಳಲ್ಲಿನ 2,09,665 ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಸ್ಮಾರ್ಟ್ ಕ್ಲಾಸ್ ರೂಂ / ಕಂಪ್ಯೂಟರ್ ಗಳನ್ನು ಒದಗಿಸಲು ರೂ.2353.60 ಲಕ್ಷಗಳಲ್ಲಿ ಸಮಗ್ರ ಶಿಕ್ಷಣ ಕರ್ನಾಟಕದಿಂದ ಅಂದಾಜಿಸಲಾಗಿದೆ. ಇದರಲ್ಲಿ ಬೀದರ್ ಜಿಲ್ಲೆಯ 3 ಶಾಲೆಗಳಿಗೆ ಅಂದಾಜು ರೂ.13.30 ಲಕ್ಷಗಳ ಅನುದಾನವನ್ನು ಯೋಜಿಸಲಾಗಿದೆ.

**ಸಂಖ್ಯೆ : EP 15 EGOV 2026**

**( ಎಸ್. ಮಧು ಬಂಗಾರಪ್ಪ)**

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಅನುಬಂಧ - 1

**205-26ನೇ ಸಾಲಿನ ಗ್ರಾಮೀಣ ಭಾಗದ ಸರ್ಕಾರಿ ಪ್ರೌಢ ಶಾಲೆಗಳಲ್ಲಿ / ಪದವಿ ಪೂರ್ವ ಕಾಲೇಜುಗಳಿಗೆ ಭಾರತ್ ನೆಟ್ ಅಥವಾ ಇತರೆ ಯೋಜನೆಯಡಿಯಲ್ಲಿ ಇಂಟರ್ ನೆಟ್ ಸಂಪರ್ಕ ನೀಡಲಾಗಿರುವ ವಿವರ**

| Sl n o | District Name | Taluk name | Name of the School |
|---|---|---|---|
| 1 | BIDAR | AURAD | DR B R AMBEDKAR GIRLS HOSTEL SCHOOL DHABKA SOCIAL WELFARE TQ AURAD DIST BIDAR,,DR B R AMBEDKAR GIRLS HOSTEL SCHOOL DHABKA SOCIAL WELFARE TQ AURAD DIST BIDAR,,KHERDA,KHERDA,BIDAR,KARNATAKA,INDIA |
| 2 | BIDAR | AURAD | GOVT H.S. TORNATORNA TQ AURAD,,GOVT H.S. TORNATORNA TQ AURAD,,TORNA,TORNA,BIDAR,KARNATAKA,INDIA |
| 3 | BIDAR | HUMNABAD | GOVT PU COLLEGEDUBALGUNDI,,GOVT PU COLLEGEDUBALGUNDI,,DUBALGUNDI,HUMNABAD,BIDAR,KA RNATAKA,INDIA |
| 4 | BIDAR | B.KALYAN | GOVT GIRLS HIGH SCHOOL RAJESHWARBASAVAKALYAN BIDAR 585331,,GOVT GIRLS HIGH SCHOOL RAJESHWARBASAVAKALYAN BIDAR 585331,,RAJESHWAR,B.KALYAN,BIDAR,KARNATAKA,INDIA |
| 5 | BIDAR | HUMNABAD | DUBALGUNDI DUBALGUNDI,,DUBALGUNDI DUBALGUNDI,,DUBALGUNDI,HUMNABAD,BIDAR,KARNATAKA,INDIA |
| 6 | BIDAR | BIDAR | KAMTHANATQ. DIST. BIDAR,,KAMTHANATQ. DIST. BIDAR,,KAMATHANA,KAMATHANA,BIDAR,KARNATAKA,INDIA |
| 7 | BIDAR | BIDAR | GOVT HIGH SCHOOL,MARKHAL,MARKHAL,,MARKHAL,BIDAR,BIDAR,KARNATAKA,INDIA |
| 8 | BIDAR | BIDAR | GOVT HIGH SCHOOL,SCHOOL ,KAPLAPUR,KAPLAPUR (W),,ANDURA,BIDAR,BIDAR,KARNATAKA,INDIA |
| 9 | BIDAR | BIDAR | GOVT HIGH SCHOOL,GOVT HPS & H.S.(RMSA),CHILLARGI,CHILLARGI,,CHILLARGI,BIDAR,BIDAR,KARNATAKA,INDIA |
| 10 | BIDAR | BHALKI | 00,KITUR RANI CHANNAMMA SCHOOL,NITTUR (B),NITTUR (B),TQ-BHALKI,,NITTUR VILLAGE,BHALKI,BIDAR,KARNATAKA,INDIA |
| 11 | BIDAR | B.KALYAN | MOULANA AZAD ENGLISH MEDIUM SCHOOL,MOULANA AZAD ENGLISH MEDIUM SCHOOL,MATHALA,MATHALA,TQ-B.KALYAN,,,MATALA,BASAVAKALYAN,BIDAR,KARNATAKA,INDIA |
| 12 | BIDAR | AURAD | MORARJI DESAI RESIDENTIAL SCHOOL,NEAR,SUB JAIL,AURAD (B),AURAD (B),,AURAD,AURAD,BIDAR,KARNATAKA,INDIA |
| 13 | BIDAR | AURAD | GHS KUSHNOOR T (Boys) |
| 14 | BIDAR | BIDAR | GHS JANWADA |
| 15 | BIDAR | BIDAR | GHS MANDAKNALLI |
| 16 | BIDAR | BIDAR | Govt PU College girls Bidar |
| 17 | BIDAR | HUMANABAD | GHS Boys Chitguppa |
| 18 | BIDAR | HUMANABAD | GOVT.HIGH SCHOOL MANNAEKHELLI |

**DIRECTOR**
**D.S.E.R.T.**
No. 4, 100R Ring Road,
[illegible] Bengaluru-560085.